

ಶೇಂಗಾ ಉಂಡಿ



ಅಳ್ಳ ಉಂಡಿ

ಎಂದೆಲ್ಲ ಹೇಳಲಾಗುತ್ತದೆ’ ಎಂದು ತಿಳಿಸಿದರು. ‘ಶ್ರಾವಣ ಮಾಸದಲ್ಲಿ ತಿಂಗಳಾನುಗಟ್ಟಲೆ ಜಿಟಿಜಿಟಿ ಮಳೆ ಹತ್ತಿರುತ್ತದೆ. ದೇಹವೂ ತಂಪಾಗುತ್ತದೆ. ಮನಸ್ಸು ಕುಗ್ಗಿರುತ್ತದೆ. ತಂಪಾದ ದೇಹಕ್ಕೆ ಕಾವು ಕೊಡಬೇಕು ಎಂಬ ದೃಷ್ಟಿಯಿಂದ ಹಿರಿಯರು ಎಳ್ಳು, ಶೇಂಗಾ, ಪುಟಾಣಿ, ಮೈದಾ ತಿನ್ನುವ ರೂಢಿ ಮಾಡಿಸಿದ್ದಾರೆ’ ಎಂಬುದು ಅವರ ಅಭಿಮತ.

‘ಮೂರು ಮಣ್ಣು ಪೂಜೆಗಳನ್ನು ರೈತರು ಮಾಡುತ್ತಾರೆ. ಮೊದಲನೆಯದ್ದು ಮಣ್ಣೆತ್ತಿನ ಅಮಾವಾಸ್ಯೆ, ಎರಡನೆಯದ್ದು ಗುಳ್ಳವ್ವನ ಪೂಜೆ, ಮೂರನೆಯದ್ದು ನಾಗರ ಪಂಚಮಿ. ನಾಗಪ್ಪ ರೈತನ ಮಿತ್ರನಾಗಿರುವುದರಿಂದ ಈ ಹಬ್ಬವೂ ಮೂಲತಃ ಕೃಷಿಗೆ ಸಂಬಂಧಿಸಿದ್ದೇ ಆಗಿದೆ. ನಾಗರಪಂಚಮಿಯನ್ನು ಕೆಲವರು ಎರಡು ದಿನ ಆಚರಿಸಿದರೆ, ಇನ್ನೂ ಕೆಲವರು 5 ದಿನ ಆಚರಿಸುತ್ತಾರೆ. ಮೊದಲ ದಿನ ರೊಟ್ಟಿ ಪಂಚಮಿ (ವಿವಿಧ ಬಗೆಯ ರೊಟ್ಟಿ ಮಾಡಿ ಅಕ್ಕಪಕ್ಕದ ಮನೆಯವರೊಂದಿಗೆ ಹಂಚಿಕೊಳ್ಳುವುದು), ಎರಡನೇ ದಿನ ನಾಗರ ಚೌತಿ (ಮನೆಯೊಳಗೆ ಹಾಲು ಹೊಯ್ಯುವುದು), ಮೂರನೇ ದಿನ ಹುತ್ತಗಳಿಗೆ ಹಾಲು ಹೊಯ್ಯುವುದು, ನಾಲ್ಕನೇ ದಿನ ಕೆರೆ ಅಂಬಲಿ (ಮಗಳನ್ನು ಗಂಡನ ಮನೆಗೆ ಮರಳಿ ಕಳುಹಿಸುವುದು), ಐದನೇ ದಿನ ಹೊಸ ತೊಡಕು (ಯಾರೂ ಬಯ್ಯಬಾರದು, ಯಾರೂ ಬಯ್ಯಿಸಿಕೊಳ್ಳಬಾರದು) ಎಂಬ ಆಚರಣೆಗಳು ಇರುತ್ತದೆ.

ನಾಡ ಮೇಲೆ ನಾಗರಪಂಚಮಿ, ನಾರ್‍ಯಾರ ಹಬ್ಬ ಏನ ಹುಬ್ಬ
ಹಂಚೀಕೇನೊಂದ ಹಾಕಲೆವ್ವ, ಎಚ್ಚ ತರುವುದಕ
ಹಿಂದಿನಂಗ ದಿನಮಾನವಿಲ್ಲ, ಸಂತಿ ಮಡುದಕ
ಸದ್ಯಕ್ಕ ಜ್ವಾಳಾ ಇಲ್ಲ, ಅಳ್ಳ ಹುರಿಯುದಕ
ತಯ್ಯಾರಾಗ್ಯಾರವ್ವ ಇವರು, ಹಬ್ಬ ಮಾಡುದಕ...

ಎಂದು ಬಡ ಹೆಣ್ಣುಮಗಳೊಬ್ಬಳು ಹಾಡಿಕೊಳ್ಳುವುದೂ ನಾಗರ ಪಂಚಮಿಗೆ ಏನು ಮಾಡುವುದು ಎಂಬ ಆಕೆಯ ಚಿಂತೆಯನ್ನು ಕಟ್ಟಿಕೊಡುತ್ತದೆ.

ಜೋಕಾಲಿ ಜೀಕುವುದೂ ಸಹ ನಾಗರ ಪಂಚಮಿ ಹಬ್ಬದ ಪ್ರಮುಖ ಅಂಶ. ಉತ್ತರ ಕರ್ನಾಟಕವೊಂದೇ ಅಲ್ಲದೆ ರಾಜ್ಯದ ಬಹುತೇಕ ಕಡೆ ಜೋಕಾಲಿ ಕಟ್ಟಿ ಆಡುವ ಸಂಭ್ರಮ ಇನ್ನೂ ಜೀವಂತವಾಗಿದೆ. ಇದನ್ನು ಕಂಡೇ ಸಂತ ಶಿಶುನಾಳ ಶರೀಫರು ಹಾಡಿದ್ದಾರೆ...

ಜೋಕಾಲ್ಯಾಡೋಣ ಬನ್ನಿ
ಬೇಕಾದ ನಾರಿಯರೆಲ್ಲ
ಸಾಕಾಗೋ ತನಕ ಆಡೋಣ
ನಾವು, ನೀವು ಸಾಕಾದ ಮ್ಯಾಲಿಳಿಯೋಣ...
ಪಂಚೆ ತತ್ವದ ಸೀರಿ, ಅಂಚೆಲ್ಲ ರೇಶಿಮೆ,
ಪಂಚಮಿಗೊಮ್ಮೆ ಉಡವೋಣ
ನಾವೂ, ನೀವು ಸಾಕಾದ ಮ್ಯಾಲಿಳಿಯೋಣ

ನಾಗರಪಂಚಮಿ ಹಬ್ಬದ ಈ ಹಾಡುಗಳನ್ನು ಗುನುಗಿಕೊಳ್ಳುತ್ತ ಉಡಿಯೊಳಗೆ ಉಂಡಿಗಳನ್ನಿಟ್ಟುಕೊಂಡು ಜೋಕಾಲಿ ಜೀಕಲು ಓಡೋಣ ಬನ್ನಿ. ■



ಜೋಕಾಲಿ ಜೀಕಿ ಸಂಭ್ರಮಿಸಿದ ಬಾಲಕಿಯರು. ಚಿತ್ರ: ಭರತ್ ಕಂದಕೂರ



ಅಂಟಿನ ಉಂಡಿ